ಪಾಪ, ಪುಣ್ಯಶಾಲಿ ಗೆರೆಗಳು ತೆಳುವಾಗಿರುತ್ತವೆ.

ಇನ್ನೂ ಡಿಪ್ರೆಶನ್ ಹೆಚ್ಚಾಗುತ್ತ ಹೋಗಹತ್ತಿತ್ತು. ಮತ್ತೊಂದು ಡ್ರೌಜಿ ಮಾತ್ರೆ ನುಂಗಿದಳು. ಹಾಗೆ ಕಣ್ಣು ಮುಚ್ಚಿದಳು. ಎಲ್ಲಿಯವರೆಗೆ ನಡೆದುಕೊಂಡು ಹೋಗಿದ್ದಳೋ. ಈ ಹುಡುಗನ ವಿಷಯದಲ್ಲಿ ಅಲ್ಲಿಂದಲೇ ಮರಳಲು ಪ್ರಯತ್ನಿಸಿದಳು. ನಿದ್ರೆ ಎಂಬುದು ಆವರಿಸಿತ್ತು. ಎರಡು ತಾಸಿನ ಆ ಸಂಪೂರ್ಣ ನಿದ್ರೆ ಕೊಂಚ ಡಿಪ್ರೆಶನ್ ಕಡಿಮೆ ಮಾಡಿತ್ತು.

ಎದ್ದು ಕೊಂಚ ಚಹಾ ಕುಡಿದಳು, ಮನೆಯಲ್ಲಿ ಓಡಾಡಿದಳು.

ಒಂದು ಪ್ರಶ್ನೆ ಕಾಡಿತು. ಹದಿನೇಳು ವರ್ಷಗಳಲ್ಲಿ ಯಾವಾಗಾದರೂ ಇಂಥಹ ಡಿಪ್ರೆಶನ್‌ಗೆ ತಾನು ಒಳಗಾಗಿದ್ದಳೆ? 'ಇಲ್ಲ' ದಿನದಿಂದ ದಿನಕ್ಕೆ ತಪಸ್ಸು ಬಲಿಯುತ್ತಾ ಹೋಗುತ್ತಿತ್ತಲ್ಲ. ಒಮ್ಮಿಂದೊಮ್ಮೆಲೆ ಈ ಡಿಪ್ರೆಶನ್ ಕಾರಣ ಆ ಹುಡುಗ ಮಹಾದೇವನೇ ಇರಬೇಕು. 'ಆಸೆಯೇ ದುಃಖಕ್ಕೆ ಮೂಲ'. ಯಾವಾಗಲೂ ಸೆಪ್ಟೆಂಬರ್ ತಿಂಗಳು ತನಗೆ ಕಾಡಿಸಿದರೂ ಇಷ್ಟೊಂದು ಕಾಡಿಸಿದ್ದು ನೆನಪಿಗೆ ಬರಲಿಲ್ಲ. ಎಲ್ಲಾ ನೆನಪುಗಳು ಪುನರವಲೋಕನಕ್ಕೆ ಒಳಗಾಗುತ್ತಿದ್ದವು ಇವಳಿಗೆ.

ಪ್ರಶಸ್ತಿ ಬಂದಾಗ ಆ ದೆಹಲಿಯ ಚಳಿಯಲ್ಲಿ, ರಾಷ್ಟ್ರಪತಿಗಳು ಹೇಳಿದ ಆ ಮಾತು ಇನ್ನೂ ನೆನಪಿದೆ. ಅದು ಭಾರತದ ಹತ್ತು ಸಾಧಕರಿಗೆ ರಾಷ್ಟ್ರಪ್ರಶಸ್ತಿ ಕೊಡುವ ಸಮಾರಂಭವಾಗಿತ್ತು. 'ಭೂಮಿಕಾರ ಸಾಧನೆಯನ್ನು ಯಾರು ಸರಿಗಟ್ಟಲಾರರು, ಬರಡಾಗಿದ್ದ ಆ ಬೆಂಗಾಡಿನಂತಹ ಪ್ರದೇಶಕ್ಕೆ ನೀರು ತಂದರು. ಸ್ತ್ರೀ ಸಹಕಾರಿ ಸಂಘಗಳ ಮುಖಾಂತರ ಮಹಿಳೆಯರನ್ನು ಸಬಲೀಕರಣದತ್ತ ಒಯ್ಯುತ್ತಿದ್ದಾರೆ. ಇಂಥವರು ನನ್ನಜೊತೆ ಇದ್ದರೆ ಭಾರತ ಸೂಪರ್ ಪವರ್ ಆಗುವುದರಲ್ಲಿ ಸಂದೇಹವಿಲ್ಲ' ಎಂದಾಗ ಇವಳು ಆ ವೇದಿಕೆಯಲ್ಲೆ ಪಕ್ಕನೆ ನಕ್ಕಳು. ರಾಷ್ಟ್ರಪತಿಗಳಿಗೆ, ನನ್ನ ಪೂರ್ವಾಶ್ರಮ ಹೇಳಿಕೊಳ್ಳೋಣವೆ? ಆಗ ಅವರ ಮಾತಿನ ಧಾಟಿ ಬದಲಾಗಬಹುದಿತ್ತು. ಇಲ್ಲವಾದರೆ ಈ ಹತ್ತು ಜನರಲ್ಲಿ ಯಾರನ್ನಾದರೂ ಹೊಗಳುತ್ತಿದ್ದರು ಪಾಪ... ಎಂದುಕೊಂಡಳು.

ಇರಲಿ ಗಲ್ಲುಶಿಕ್ಷೆ ಆದವರಿಗೂ ಕ್ಷಮಾ ಮಾಡುವ ಅಧಿಕಾರ ಅವರಿಗೆ ಮಾತ್ರ ಇದೆ ಎಂದುಕೊಂಡಳು.

ಮತ್ತೆ ಟಣ್... ಟಣ್...

ಬಾಗಿಲು ಬಡಿದ ಶಬ್ದ. ಬಾಗಿಲ ಹತ್ತಿರ ಹೋದರೆ ಅದೇ ವಿಕಾಸವಾದದತ್ತ ನಂಬಿಕ ಇಲ್ಲದ ಆ ಹುಡುಗಿ, ಮಲ್ಲಿಕಾ ಮತ್ತೆ ಬಂದಿದ್ದಾಳೆ, ಗ್ಲಾಸಿನಲ್ಲಿ ಕಾಣುತ್ತಿದ್ದಾಳೆ ಮುಂಜಾನೆ ಸುಮಾರು ನಾಲ್ಕು ತಾಸುಗಳ ಕೃತಕ ನಗುನಕ್ಕು ದವಡೆ ಗಲ್ಲಗಳೆಲ್ಲ ನೋವಾಗಿವೆ.



ಚೆಕ್ ಸಹಿ ಮಾಡಿಸಿಕೊಳ್ಳಲು ಬಂದಿರಬಹುದು. ಅಥವಾ ಹೊಸ ನಿವೇದನೆ, ಆಕೆ ಈ ಹದಿನೇಳು ವರ್ಷಗಳಲ್ಲಿ ಬರೀ ಮಾತಾಡಿದ್ದು ಬಿಟ್ಟು ಏನೂ ಮಾಡಿಲ್ಲ.

ಮತ್ತೆ ಟ್ರಣ್... ಟ್ರಣ್... ಟ್ರಣ್...

ಬಾಗಿಲು ತೆಗೆದಳು.

ಒಬ್ಬರಲ್ಲ ಇಬ್ಬರಿದ್ದಾರೆ.

ಅವರ ಹಿಂದೆ ಸಂಸ್ಥೆಯ ಕಾರ್ಯದರ್ಶಿ ಮಾಲತಿ ಮಾಡಬೋಳೆ ಅವರು ಬಂದಿದ್ದಾರೆ. ಮಲ್ಲಿಕಾಳೇ ಕರೆದುಕೊಂಡು ಬಂದಿರ ಬೇಕು. ನನ್ನ ಏಕಾಂತವನ್ನು ಅಕ್ಷರಶಃ ಧ್ವಂಸ ಮಾಡುವುದರಲ್ಲಿ ಇವಳ ಪಾಲು ನೂರಕ್ಕೆ ನೂರು.

'ಬನ್ನಿ, ಬನ್ನಿ' ಎಂದು ಕೃತಕ ಅಸ್ವಾಭಾವಿಕ ನಗು ನಕ್ಕಳು ಭೂಮಿಕಾ. ಮಾಲತಿ ಮಾಡಿಬೋಳೆ ಮೆಲ್ಲಗೆ ಮಾತಡಿದರು.

'ನೀವು ಬೇಗ ಈ ಖಿನ್ನತೆಯಿಂದ ಹೊರಬರಬೇಕು. ಆ ಇನ್ನೊಂದು ಮಹತ್ವಾಕಾಂಕ್ಷೆ ಯೋಜನೆಯಿದೆಯಲ್ಲ. ಆ ಗುಡ್ಡಗಾಡುಗಳ ಬದಿಗುಂಟ ನೀರು ಸಂಗ್ರಹಿಸಿ, ಕೃಷಿಗೆ ಉಪಯೋಗಿಸುವುದು. ಆ ಯೋಜನೆಯನ್ನು ಬೇಗ ಅನುಷ್ಠಾನಗೊಳಿಸಬೇಕಾಗಿದೆ. ಅದು ನೀವು ಕಂಡ ಕನಸು' ಎಂದರು ಮಾಲತಿ ಮಾಡಬೋಲೆ.

ಮಲ್ಲಿಕಾ ಏನೋ ಕಣ್ಸನ್ನೆ ಮಾಡುತ್ತಿದ್ದರು.

'ಆಂ ಒಂದು ಮುಖ್ಯ ವಿಷಯ'